**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ</u>**

CC No. 1006/2021
CW-3 / PW -4

ಹೆಸರು : ಸಾಗರ ಬಸವರಾಜ ಮಗದುಮ
ವಯಸ್ಸು : 29 ವರ್ಷ
ಉದ್ಯೋಗ : ಡಾಟಾ ಎಂಟ್ರಿ ಆಪರೇಟರ , ಹೊಸಪೇಟೆ ಗ್ರಾಮ ಪಂಚಾಯತಿ
ವಾಸಸ್ಥಳ : ಹಿಡಕಲ್ ಡ್ಯಾಂ ತಾಃ ಹುಕ್ಕೇರಿ

( ದಿನಾಂಕ 07-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -</u>**

1. ಚಾಸಾ–2 ಇವರ ಪರಿಚಯ ಇದೆ . ದಿನಾಂಕ 11–6–2021 ರಂದು ನಾನು ಮತ್ತು ಚಾಸಾ–2 ರವರು ಹಿಡಕಲ್ ಡ್ಯಾಂನ ಹಿನ್ನೀರಿನ ಪ್ರದೇಶಕ್ಕೆ ಹೋಗಿದ್ದೆವು. ಅಲ್ಲಿ ಚಾಸಾ–1 ರವರೂ ಸಹ ಇದ್ದರು. ಅಲ್ಲಿ ಪೋಲಿಸರು ಸಹಿ ಮಾಡು ಎಂದು ಹೇಳಿದರು. ನಾವು ಸಹಿ ಮಾಡಿದೆವು. ಅಲ್ಲಿ ಆರೋಪಿತರು ಚಾಸಾ–1 ರವರ ಮೇಲೆ ಅಟ್ಯಾಕ ಮಾಡಿದರು ಎಂದು ಪೋಲಿಸರು ತಿಳಿಸಿದರು. ಅಲ್ಲಿ ಪೋಲಿಸರು ಪಂಚನಾಮೆಯನ್ನು ಓದಿ ಹೇಳಿರುವುದಿಲ್ಲ ಸಹಿ ಮಾತ್ರ ಮಾಡಿಸಿಕೊಂಡರು. ಸದರಿ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ–2(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ– ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

2. ಪೋಲಿಸರು ನಮಗೆ ಎಲ್ಲಾ ಓದಿ ಹೇಳಿ ಸಹಿ ಮಾಡಿಸಿಕೊಂಡರು ಎಂದರೆ ನಿಜ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲಃ**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೇ

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ**

CC No. 1006/2021
CW2 / PW -3

ಹೆಸರು : ವಿಶಾಲ ಮನೋಹರ ಮಾನೆ
ವಯಸ್ಸು : 34 ವರ್ಷ
ಉದ್ಯೋಗ : ಬಿಲ್ ಕಲೆಕ್ಟರ
ವಾಸಸ್ಥಳ : ಶಿಂಧಿಹಟ್ಟಿ ತಾಃ ಹುಕ್ಕೇರಿ

( ದಿನಾಂಕ 07-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -**

**1.** ಚಾಸಾ–3 ಇವರ ಪರಿಚಯ ಇದೆ . ದಿನಾಂಕ 11–6–2021 ರಂದು ನಮ್ಮ ಪಿಡಿಓ ರವರು ಇರದ ಕಾರಣ ನಮ್ಮನ್ನು ಹಿಡಕಲ್ ಡ್ಯಾಂ ಪೋಲಿಸರು ನಮ್ಮನ್ನು ಡ್ಯಾಂ ಹಿಂದೆ ಇರುವ ಹೆಲಿಪ್ಯಾಡ ಹತ್ತಿರ ನಮ್ಮನ್ನು ಕರೆಸಿಕೊಂಡರು . ಅಲ್ಲಿ ಫೋಟೊ ತೆಗೆಸಿಕೊಂಡರು ಹಾಗೂ ಸಹಿ ಮಾಡಿಸಿಕೊಂಡರು. ಅಲ್ಲಿ ಹಿಂದಿನ ದಿನ ಜಗಳ ಆಗಿತ್ತು . ಏನು ಜಗಳ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆ ಜಗಳದ ಸಂಬಂಧ ನಮ್ಮ ಫೋಟೊ ತೆಗೆಸಿಕೊಂಡರು. ಅಲ್ಲಿ ಮತ್ತೊಬ್ಬರು ಇದ್ದರು . ಅವರ ಹೆಸರು ನನಗೆ ಈಗ ನೆನಪಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. ದಿಃ 11–06–2021 ರಂದು ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ಪೋಲಿಸರು ಹಿಡಕಲಿ ಡ್ಯಾಂ ಕಡೆಯಿಂದ ಅರಳಿಕಟ್ಟೆ ಕಡೆಗೆ ಸಾಗಿದ ರಸ್ತೆಯ ಪಶ್ಚಿಮ ಬದಿಯಲ್ಲಿ ಸುರೇಶ ಮಾರುತಿ ಕಾಟಾಬಳಿ ಇವರ ಮನೆಯಿಂದ ಪಶ್ಚಿಮಕ್ಕೆ 100 ಮೀಟರ ಅಂತರದಲ್ಲಿ ಹಿಡಕಲ್ ಡ್ಯಾಂ ನ ಹಿನ್ನೀರಿನ ಪ್ರದೇಶದಲ್ಲಿ ಸುಮಾರು 10–15 ದಿನ ಮುಖಕ್ಕೆ ಮಾಸ್ಕ ಹಾಕಿಕೊಂಡು ಚಾಸಾ–1 ಇವರಿಗೆ ಕಲ್ಲುಗಳನ್ನು ಎಸೆದು ಕರ್ತವ್ಯಕ್ಕೆ ಅಡ್ಡಿಪಡಿಸಿದ ಜಾಗ ಇದೇ

ಎಂದು ಹೇಳಿದ ಮೇರೆಗೆ ಅಲ್ಲಿ ಪೋಲಿಸರು ಪಂಚನಾಮೆ ಮಾಡಿ , ಕಚ್ಚಾ ನಕಾಶೆ ಮಾಡಿ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಸಾಕ್ಷಿ ಒಂದು ಬಿಳಿ ಹಾಳೆ ಮೇಲೆ ಸಹಿ ಮಾಡಿಸಿಕೊಂಡರು ಎಂದು ಹೇಳುತ್ತಾರೆ. ಸಾಕ್ಷಿ ಈ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ–2(ಬಿ) ಎಂದು ಗುರುತಿಸಲಾಯಿತು. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲಃ**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೇ

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ